# ಯೇಸು: ದೇಹದಲ್ಲಿ ದೇವರು

## ರಾಯ್ ಎಚ್. ಲಾನಿಯರ್ ಸಿನಿಯರ್

ನಜರೇತಿನ ಯೇಸುವು ಇಪ್ಪತ್ತು ಶತಮಾನಗಳ ವರೆಗೆ ಜನರ ಅದ್ಭುತ ದೃಷ್ಟಾಂತ ವಾಗಿದ್ದನು. ಪಾಪ ರಹಿತ ದೇವರ ಕುಮಾರನಂತೆ ಮತ್ತು ತಮ್ಮ ಪಾಪಗಳಿಂದ ಜನರನ್ನು ರಕ್ಷಿಸುವಾತನಂತೆ ಆತನ ಸ್ನೇಹಿತರು ಆತನನ್ನು ಪ್ರೀತಿಸಿದರು ಮತ್ತು ಆರಾಧಿಸಿದರು. ಆತನ ವೈರಿಗಳು ಮತ್ತು ವಿವಿಧ ಹಂತದ ಅವಿಶ್ವಾಸಿಗಳು ಆತನನ್ನು ಅಪಕೀರ್ತಿಗೊಳಿಸಲು ಲೆಕ್ಕವಿಲ್ಲದಷ್ಟು ವ್ಯರ್ಥ ಪ್ರಯತ್ನಗಳನ್ನು ಮಾಡಿದರು, ಆದರೆ ಆತನು ಮಾನವನಿಗಿಂತ ಹೆಚ್ಚಾದವನಾಗಿದ್ದಾನೆಂಬ ದೃಷ್ಟಿಕೋನವನ್ನು ಒಪ್ಪಿಕೊಳ್ಳಲು ಒತ್ತಾಯಿಸಲ್ಪಟ್ಟರು.

ಮೊದಲೆಂದೂ ಅಥವಾ ಆತನ ದಿನದಿಂದ ಯಾರೂ ಜೀವಿಸಿದ ರೀತಿಯಲ್ಲಿ ಆತನು ಜೀವಿಸಿದನು. ವಿಧಾನದಲ್ಲಿಯೂ ವಿಷಯದಲ್ಲಿಯೂ ಆತನ ಬೋಧನೆಯು ಯಾವುದೇ ಮನುಷ್ಯನ ಯಾವುದೇ ಯುಗದಲ್ಲಿಯ ಬೋಧನೆಗಿಂತ ಹೆಚ್ಚು ಶ್ರೇಷ್ಠ ವಾಗಿತ್ತು. ಆತನ ಕಾರ್ಯಗಳು ನಿಜವಾಗಿಯೂ ದೇವರ ಕಾರ್ಯಗಳಾಗಿದ್ದವು. ಹಟ ಸ್ವಭಾವದ ಮತ್ತು ದುಷ್ಟತ್ವದ ವಿರೋಧವಿದ್ದರೂ ಆತನ ಪ್ರಭಾವವು ಹೆಚ್ಚು ಜನರಿಂದ ಅನುಭವಿಸಲ್ಪಟ್ಟಿತು ಹಾಗೂ ಆತನ ಮೊದಲು ಇಲ್ಲವೇ ಆತನ ದಿನದಿಂದ ಯಾವುದೇ ಇತರ ಮನುಷ್ಯನಿಗಿಂತ ಹೆಚ್ಚು ಒಳ್ಳೆಯನತಕ್ಕೆ ನಡಿಸಿತು.

ದುಷ್ಟ ಜನರೂ ಹಾಗೂ ಅವಿಶ್ವಾಸಿಗಳು ವಿವಿಧ ಮಾರ್ಗಗಳಲ್ಲಿ ಈ ಸಂಗತಿಗಳನ್ನು ಎಣಿಸಲು ಪ್ರಯತ್ನಿಸಿದರು. ಆದರೆ ಕೇವಲ ಒಂದೇ ಒಂದು ತೃಪ್ತಿಕರವಾದ ವಿವರಣೆಯು ಇರುವುದು. ಒಮ್ಮೆಲೇ ಸರಳವಾದ ಮತ್ತು ಉತ್ತಮವಾದ ಈ ವಿವರಣೆಯು ಯಾವುದೇ ಮೋಸವಿಲ್ಲದ ಒಬ್ಬ ಇಸ್ರಾಯೇಲನ ಮಾತುಗಳಲ್ಲಿ ಒಳಗೊಂಡಿತ್ತು: "ಗುರುವೇ, ನೀನು ದೇವಕುಮಾರನು ಸರಿ" (ಯೋಹಾನ 1:49ಎ; ನೋಡಿರಿ ವ. 17). ಪರಿಶುದ್ಧ ಬರಹಗಳ ಬೋಧನೆಗೆ ಅನುಸಾರವಾಗಿ ನಜರೇತಿನ ಯೇಸುವು ದೇವರು - ದೇಹದಲ್ಲಿ ದೇವರು, ಶರೀರಧಾರಿಯಾದ ದೇವರು, ಶರೀರದಲ್ಲಿ ಪ್ರಕಟಗೊಂಡ ದೇವರು ಆಗಿದ್ದನು.

### ಆತನು ದೇವರಾಗಿದ್ದನೆಂದು ಪ್ರವಾದಿಗಳು ಹೇಳಿದರು

**ಯೆಶಾಯ**

ಯೇಸುವು ಜನಿಸುವದಕ್ಕಿಂತ ನೂರಾರು ವರ್ಷಗಳ ಮೊದಲು, "ಇಗೋ, ಒಬ್ಬ ಕನ್ಯಕೆಯು ಗರ್ಭಿಣಿಯಾಗಿ ಮಗನನ್ನು ಹೆತ್ತು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು" ಎಂದು ಯೆಶಾಯನು ಹೇಳಿದನು (ಯೆಶಾಯ 7:14). ಯೇಸುವು ಜನಿಸಿದಾಗ ಈ ಪ್ರವಾದಿಯು ನೆರವೇರಿತು ಎಂದು ಮತ್ತಾಯನು ಹೇಳಿದನು (ಮತ್ತಾಯ 1:22). "ಇಮ್ಮಾನುವೇಲ್" ಪದವನ್ನು "ದೇವರು ನಮ್ಮೊಂದಿಗೆ ಇದ್ದಾನೆ" ಎಂಬ ಅರ್ಥದಿಂದ ನಮಗೆ ವ್ಯಾಖ್ಯಾನಿಸಿದನು (ಮತ್ತಾಯ 1:23), ಹೀಗೆ ಯೆಶಾಯನ ಮತ್ತು ಮತ್ತಾಯನ ಪ್ರಕಾರ, ಯೇಸುವು "ನಮ್ಮೊಂದಿಗೆ ಇರುವ ದೇವರಾಗಿದ್ದಾನೆ."

ಪುನಃ, ಆತನ ಬರೋಣವನ್ನು ಈ ಮಾತುಗಳಲ್ಲಿ ಯೇಸುವು ಮುಂತಿಳಿಸಿದನು:

> ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು (ಯೆಶಾಯ 9:6).

ದಾವೀದನ ಸಿಂಹಾಸನದ ಮೇಲೆ ಕುಳಿತು ಕೊಳ್ಳಬೇಕಾಗಿದ್ದಾತನು "ಪರಾಕ್ರಮಿಯಾದ ದೇವರು" ಆಗಿರುವನೆಂದು ಈ ಹೇಳಿಕೆಯಲ್ಲಿ ನಾವು ಕಲಿತು ಕೊಳ್ಳುತ್ತೇವೆ. ಗಬ್ರಿಯೇಲು ದೂತನು ಮರಿಯಳಿಗೆ ಒಬ್ಬ ಮಗನಾಗುವನು, ಅವನನ್ನು ಯೇಸು ಎಂದು ಕರೆಯುವರು ಎಂದು ಹೇಳಿದಾಗ ಈ ಪ್ರವಾದನೆಗೆ ಅನ್ವಯಿಸಿದನು (ಲೂಕ 1:31). "ಆತನು ಮಹಾ ಪುರುಷನಾಗಿ ಮಹೋನ್ನತನ ಕುಮಾರನೆನಿಸಿಕೊಳ್ಳು ವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು" (ಲೂಕ 1:32). ಮರಿಯಳ ಮಗನು "ಮಹೋನ್ನತನ ಕುಮಾರನೆನಿಸಿಕೊಳ್ಳುವನು" ಯಾಕಂದರೆ ಆತನು ಯೆಶಾಯನ ಪ್ರವಾದನೆಯ "ಪರಾಕ್ರಮಿಯಾದ ದೇವರು" ಆಗಿದ್ದನು.

**ಮೀಕ**

"ಎಫ್ರಾತದ ಬೇತ್ಲೆಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದ್ದಾಗಿದ್ದರೂ ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದದ್ದು" (ಮೀಕ 5:2) ಎಂದು ಪ್ರವಾದಿ ಮೀಕನು ಹೇಳಿದನು. ಕ್ರಿಸ್ತನು ಹುಟ್ಟಬೇಕಾದದ್ದು ಎಲ್ಲಿ ಎಂದು ಕೇಳಿ ದಾಗ ಮಹಾಯಾಜಕರೂ ಶಾಸ್ತ್ರಿಗಳೂ ಈ ಪ್ರವಾದನೆಯ ಕಡೆಗೆ ತಿರುಗಿದರು. "ಯೆಹೂದ್ಯರಿಗೆ ಅರಸನಾಗಿ ಹುಟ್ಟಿದಾತನನ್ನು" (ಮತ್ತಾಯ 2:2-8) ಅವರು ಕಂಡುಕೊಳ್ಳ ಬಹುದೆಂದು ಹೆರೋದನು ಪಂಡಿತರನ್ನು ಅಲ್ಲಿಗೆ ಕಳುಹಿಸಲಿಕ್ಕೆ ಈ ಪ್ರವಾದನೆಯು ಕಾರಣವಾಯಿತು. ಮೀಕನ ಪ್ರಕಾರವಾಗಿ, ಯೆಹೂದ್ಯರಿಗೆ ಅರಸನಾಗಿ ಹುಟ್ಟಿದಾತನು ಸದಾಕಾಲಕ್ಕೂ ಇರುವನು. ಯಾವುದೇ ಜೀವಿಯ ಬಗ್ಗೆ ಇದು ಹೇಳಲ್ಪ ಡಲಾರದು; ಅಂಥ ಮಾತುಗಳಲ್ಲಿ ಕೇವಲ ಸೃಷ್ಟಿಕರ್ತನು ಮಾತ್ರವೇ ವಿವರಿಸಲ್ಪಡಬಲ್ಲನು, ಹೀಗೆ ಪ್ರವಾದನೆಗನುಗುಣವಾಗಿ, ಆತನು ದೇವರಂತೆ ಗುರುತಿಸಲ್ಪಡುವನು.

## ತಾನು ದೇವರಾಗಿದ್ದನು ಎಂದು ಯೇಸು ಹಕ್ಕು ಸಾಧಿಸಿದನು

**ಯೆಹೂದ್ಯರ ಭಾವನೆ**

ಯೇಸುವು ತಾನು ದೇವರಾಗಿದ್ದೇನೆಂದು ಪ್ರಸಿದ್ಧಿ ಪಡಿಸಿದನೆಂಬುದನ್ನು ಸಿದ್ಧಪಡಿಸಿ ತೋರಿಸಲು ಪರಿಶುದ್ಧ ಬರಹಗಳನ್ನು ಹೇಳುವ ಮೊದಲು, ಮೆಸ್ಸೀಯನ ಬಗೆಗಿನ ಯೆಹೂದ್ಯರ ಮನೋಭಾವನೆಯೊಂದಿಗೆ ಪರಿಚಯವುಳ್ಳವರಾಗಿರುವ ಅವಶ್ಯಕತೆಯಿದೆ. ಈ ಯೆಹೂದಿ ಮನೋಭಾವನೆಯು ಅವರಲ್ಲಿಯೇ ಒಬ್ಬನಾದ Tryphoನಿಂದ, Justin Martyrನೊಂದಿಗಿನ (c.110-c.165) ಪ್ರಸಿದ್ಧ ಸಂಭಾಷಣೆಯಲ್ಲಿ ಪ್ರತ್ಯಕ್ಷಪಡಿಸಲ್ಪಟ್ಟಿದೆ:

> … ಯುಗಗಳ ಮೊದಲು ಈ ಕ್ರಿಸ್ತನು ದೇವರಂತೆ ಅಸ್ತಿತ್ವದಲ್ಲಿದ್ದನು, ಆಮೇಲೆ ಜನನ ಹೊಂದಿ ಮಾನವನಾಗಲು ಆತನು ತನ್ನನ್ನು ಒಪ್ಪಿಸಿಕೊಟ್ಟನು, ಆದಾಗ್ಯೂ ಆತನು ಮಾನವನ ಮಾನವನಾಗಿರಲಿಲ್ಲ, ಈ (ನಂಬಿಕೆಯು) ವಿಪರ್ಯಾಸವಾದದ್ದು ಆಗಿರುವದಷ್ಟೇ ಅಲ್ಲ ಆದರೆ ಹುಚ್ಚುತನದ್ದಾಗಿಯೂ ಕಾಣಿಸುತ್ತದೆ.[1]

> ಆತನನ್ನು ಮಾನವನಾಗಿದ್ದಾನೆ ಮತ್ತು ಆಯ್ಕೆಯಿಂದ ಅಭಿಷೇಕ ಹೊಂದಿದ್ದಾನೆ ಹಾಗೂ ಕ್ರಿಸ್ತನಾಗಿದ್ದಾನೆ ಎಂದು ಒಪ್ಪಿಕೊಳ್ಳುವವರು ಹೆಚ್ಚು ಚನ್ನಾಗಿ ಮಾತಾಡುವವರಂತೆ ನನಗೆ ಕಂಡು ಬರುತ್ತಾರೆ … ಕ್ರಿಸ್ತನು ಮಾನವರ (ಜನಿಸಿದ) ಮಾನವನಾಗಿರುವನು, ಮತ್ತು ಎಲೀಯನು ಬರುವಾಗ ಆತನನ್ನು ಅಭಿಷೇಕಿಸುವನು ಎಂದು ನಾವೆಲ್ಲರೂ ನಿರೀಕ್ಷಿಸುತ್ತೇವೆ. ಆದರೆ ಈ ಮನುಷ್ಯನು ಕ್ರಿಸ್ತನಾಗಿ ಕಂಡುಬಂದರೆ, ಆತನು ನಿಶ್ಚಿತವಾಗಿಯೂ ಮನುಷ್ಯರ (ಜನಿಸಿದ) ಮಾನವನಂತೆ ತಿಳಿಯಲ್ಪಡುವನು; ಆದರೆ ಎಲೀಯನು ಇನ್ನೂ ಬಾರದೇ ಇರುವ ಹಿನ್ನೆಲೆಯಿಂದ, ಈ ಮನುಷ್ಯನು ಆತನು [ಕ್ರಿಸ್ತನು] ಆಗಿರುವದಿಲ್ಲ ಎಂದು ಊಹಿಸಬೇಕಾಗಿದೆ.[2]

ಯೇಸುವಿನ ಸಮಯದಲ್ಲಿ ಈ ನಂಬಿಕೆಯನ್ನು ಯೆಹೂದ್ಯರು ಇಟ್ಟುಕೊಂಡಿದ್ದರು ಎಂಬುದು ಮತ್ತಾಯ 22:41-45ರಲ್ಲಿ ದಾಖಲೆಯಾದ ಘಟನೆಯಿಂದ ಕಂಡುಬರುತ್ತದೆ:

> ಫರಿಸಾಯರು ಕೂಡಿಬಂದಿರುವಾಗ ಯೇಸು ಅವರಿಗೆ: "ಬರಬೇಕಾದ ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ ಮಗನು?" ಎಂದು ಪ್ರಶ್ನೆ ಹಾಕಿದ್ದಕ್ಕೆ ಅವರು ಆತನಿಗೆ, "ದಾವೀದನ ಮಗನು" ಎಂದು ಹೇಳಲು ಆತನು, "ಹಾಗಾದರೆ ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತು ಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬ ಮಾತಿನಲ್ಲಿ ದಾವೀದನು ಪರಿಶುದ್ಧಾತ್ಮ ಪ್ರೇರಿತನಾಗಿ ಆತನನ್ನು ಒಡೆಯನು ಅನ್ನುವದು ಹೇಗೆ? ದಾವೀದನು ಆತನನ್ನು ಒಡೆಯನೆಂದು ಹೇಳಿದ ಮೇಲೆ ಆತನು ಅವನಿಗೆ ಮಗನಾಗುವದು ಹೇಗೆ?" ಅಂದನು.

ದಾವೀದನು ತನ್ನ ವಂಶಜನನ್ನು "ಕರ್ತನು" ಎಂದು ಯಾಕೆ ಕರೆದನು ಎಂಬುದನ್ನು ವಿವರಿಸಲಿಕ್ಕೆ ಆ ಯೆಹೂದ್ಯರು ಶಕ್ತರಾಗಲಿಲ್ಲ? ಮೆಸ್ಸೀಯನು ದಾವೀದನ ಕುಟುಂಬದಲ್ಲಿ "ಮಾನವ ತಂದೆ ತಾಯಿಗಳಿಂದ ಜನಿಸುವದನ್ನು" ಅವರು ನಿರೀಕ್ಷಿಸಿದ್ದರು ಎಂಬುದು ಸರಳವಾದ ಉತ್ತರವಾಗಿದೆ. ಆತನು ದೇಹದಲ್ಲಿ ದೇವರಾಗಿರಬೇಕಾಗಿತ್ತು ಎಂದು ಬೋಧಿಸಿದ, ಪರಿಶುದ್ಧ ಬರಹವನ್ನು ಅವರು ತಿಳಿದಿದ್ದರೆ (ದಾವೀದನಿಂದ ಇಳಿದು ಬಂದ ದೇಹ) ಅವರು ಪ್ರಶ್ನೆಗೆ ಉತ್ತರ ಕೊಡ ಬಹುದಿತ್ತು.

ಯೆಹೂದ್ಯರ ಅಭಿಪ್ರಾಯದಲ್ಲಿ, ಕ್ರಿಸ್ತನಾಗಿದ್ದೇನೆ, ಮೆಸ್ಸೀಯನಾಗಿದ್ದೇನೆ ಎಂದು ಒಬ್ಬನು ಹೇಳಿಕೊಳ್ಳುವುದು ದೊಡ್ಡ ಪಾಪವಾಗಿದ್ದಿಲ್ಲ; ಯಾರಾದರೂ ಕ್ರಿಸ್ತನಾಗಿದ್ದಾನೆಂದು ನಂಬುವುದು ಜನರಿಗೆ ಅಪರಾಧವಾಗಿರಲಿಲ್ಲ. ಮತ್ತಾಯ 9:27ರಲ್ಲಿ ಇಬ್ಬರು ಕುರುಡರು ಯೇಸುವನ್ನು "ದಾವೀದನ ಕುಮಾರನು" ಎಂದು ಕರೆದರು; ಮತ್ತಾಯ 15:22ರಲ್ಲಿ ಕಾನಾನ್ಯ ಸ್ತ್ರೀಯು ಅದನ್ನೆ ಮಾಡಿದಳು. ಆತನ "ಜಯಪ್ರದ ಪ್ರವೇಶ" ಎಂದು ಕರೆಯಲ್ಪಟ್ಟ ಯೇಸುವಿನ ಯೆರೂಸಲೇಮಿನೊಳಗಿನ ಮೆರವಣಿಗೆಯಲ್ಲಿ ಆತನ

ಮುಂದೆ ಹೋದ ಜನಸಮೂಹವು "ದಾವೀದನ ಕುಮಾರನಿಗೆ ಹೊಸನ್ನ" ಎಂದು ಹೇಳಿತು (ಮತ್ತಾಯ 21:1-17). "ದಾವೀದನ ಕುಮಾರನು" ಎಂಬ ಹೇಳಿಕೆಯು ಅದೇ ರೀತಿಯಲ್ಲಿ ಮತ್ತಾಯ 21:9 ಮತ್ತು 22:42ರಲ್ಲಿ ಉಪಯೋಗಿಸಲ್ಪಟ್ಟಿದೆ, ಜನ ಸಮೂಹಗಳು ಆತನನ್ನು ಕ್ರಿಸ್ತ ಎಂದು ಕರೆಯುತ್ತಿದ್ದರು, ಆದಾಗ್ಯೂ ಅವರಲ್ಲಿ ಕೆಲವರು ಆತನನ್ನು ದೇವರ ಕುಮಾರನು, ಶರೀರಧಾರಿಯಾದ ದೇವರು ಎಂದು ನಂಬಿದ್ದರು. ಕೆಲವೇ ದಿನಗಳನಂತರ, ಆತನು ತಾನು ದೇವರ ಕುಮಾರನು ಎಂದು ಹೇಳಿದ್ದರಿಂದ ದೇವ ದೂಷಣೆಗಾಗಿ ಆತನನ್ನು ಖಂಡಿಸುವಲ್ಲಿ ಅವರು ನಾಯಕರೊಂದಿಗೆ ಸೇರಿಕೊಂಡರು.

**ಯೇಸುವಿನ ಹಕ್ಕು ಸಾಧನೆ**

ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು, ಯೇಸುವು ತನ್ನನ್ನು ದೇವರೆಂದು ಕರೆದುಕೊಂಡಿದ್ದನ್ನು ಗಮನಿಸೋಣ. "ಮನುಷ್ಯ ಕುಮಾರನು" ಎಂದರೆ "ಮನುಷ್ಯನು" ಎಂದರ್ಥವಾಗುವಂತೆ "ದೇವರು" ಎಂದರ್ಥವಾಗುವಂತೆ ಆತನು "ದೇವರ ಕುಮಾರನು" ಎಂಬ ಮಾತನ್ನು ಉಪಯೋಗಿಸಿದನು. ಯೋಹಾನ 5:17, 18ರಲ್ಲಿ ನಾವು ಹೀಗೆ ಓದುತ್ತೇವೆ,

> ಅದಕ್ಕೆ ಯೇಸು, "ನನ್ನ ತಂದೆಯು ಇಂದಿನವರೆಗೂ ಕೆಲಸ ಮಾಡುತ್ತಾನೆ, ನಾನೂ ಕೆಲಸ ಮಾಡುತ್ತೇನೆ" ಅಂದನು. ಈ ಮಾತನ್ನು ಹೇಳಿದ್ದರಿಂದ ಆತನು ಸಬ್ಬತ್ ದಿನವನ್ನು ಅಲಕ್ಷ್ಯ ಮಾಡಿದ್ದಲ್ಲದೆ ದೇವರನ್ನು ತನ್ನ ತಂದೆ ಎಂದು ಹೇಳಿ ತನ್ನನ್ನು ದೇವರಿಗೆ ಸಮಾನ ಮಾಡಿಕೊಂಡನೆಂದು ಯೆಹೂದ್ಯರು ಆತನನ್ನು ಕೊಲ್ಲುವದಕ್ಕೆ ಮತ್ತಷ್ಟು ಪ್ರಯತ್ನ ಮಾಡಿದರು.

ಯೆಹೂದ್ಯರು ತಮ್ಮನ್ನೇ ದೇವರ ಮಕ್ಕಳು ಎಂದು ಕರೆದುಕೊಂಡರು ಹಾಗೂ ದೇವರನ್ನು ತಮ್ಮ ತಂದೆ ಎಂದು ಕರೆದರು (ಯೋಹಾನ 8:41). ನಿಶ್ಚಯವಾಗಿ, ಯೇಸುವು ದೇವರನ್ನು ತನ್ನ ತಂದೆ ಎಂದು ಕರೆದುಕೊಳ್ಳುವದಕ್ಕೆ ಅವರು ಅಡ್ಡೀ ಮಾಡಬಾರದಿತ್ತು - ಆದರೆ ಅವರು ಹಾಗೆ ಮಾಡಿದರು. ಯಾಕೆ? ಯೇಸುವು ತಾನು "ದೇವರೊಂದಿಗೆ ಸಮಾನನಾಗಿದ್ದೇನೆ" ಎಂದು ಅನ್ವಯಿಸುವ "ಸ್ವಂತ ತಂದೆ" ಎಂಬರ್ಥವುಳ್ಳ ಮಾತನ್ನು ಉಪಯೋಗಿಸಿದ್ದಕ್ಕೆ ಅವರ ವಿರೋಧವಿತ್ತು. ದೇವರಿಗೆ ತನ್ನನ್ನು ಸರಿಸಮಾನನನ್ನಾಗಿ ಮಾಡಿದ ಮಾತನ್ನು ಆತನು ಉಪಯೋಗಿಸಿದಾಗ, ತನ್ನನ್ನೇ ದೇವರೆಂದು ಕರೆದುಕೊಂಡಂತೆ ಅದಾಗಿತ್ತು, ಅದನ್ನು ಅವರು ದೇವದೂಷಣೆ ಎಂದು ಯೋಚಿಸಿದರು.

ಯೋಹಾನ 8:53ಬಿ, 54ರಲ್ಲಿ ಯೆಹೂದ್ಯರು ಆತನನ್ನು, "ನಿನ್ನನ್ನು ಯಾರೆಂತ ಮಾಡಿಕೊಳ್ಳುತ್ತೀ?" ಎಂದು ಕೇಳಿದರು. "ನನ್ನನ್ನು ನಾನೇ ಮಹಿಮೆ ಪಡಿಸಿಕೊಂಡರೆ ನನ್ನ ಮಹಿಮೆ ಹುರುಳಿಲ್ಲದ್ದು; ನನ್ನನ್ನು ಮಹಿಮೆ ಪಡಿಸುವವನು ನನ್ನ ತಂದೆಯೇ, ನೀವು ಆತನನ್ನು ನಮ್ಮ ದೇವರು ಅನ್ನುತ್ತೀರಿ" ಎಂದು ಯೇಸು ಉತ್ತರ ಕೊಟ್ಟನು. ಯೇಸುವು ತನ್ನ ಯೋಗ್ಯ ತಂದೆಯನ್ನು ಯೆಹೂದ್ಯರು ತಮ್ಮ ದೇವರು ಎಂದು ಕರೆದಾತನಾಗಿರುವನೆಂದು ಗುರುತಿಸಿದನು. ಬೇರೆ ಯಾವ ಜೀವಿಯೂ ಇಲ್ಲದ ನಿರ್ದಿಷ್ಟವಾದ ರೀತಿಯಲ್ಲಿ ತಾನು ದೇವರ ಕುಮಾರನು ಆಗಿದ್ದನು ಎಂದು ಬೇರೆ ರೀತಿಯಲ್ಲಿ ಹೇಳುವುದಾಗಿತ್ತು. ಆದುದರಿಂದ, ಆತನು ತನ್ನನ್ನು ದೇವರೊಂದಿಗೆ

ಸರಿಸಮಾನನನ್ನಾಗಿ ಮಾಡಿಕೊಳ್ಳುತ್ತಿದ್ದನು.

ಯೇಸುವು ತನ್ನನ್ನು ದೇವರ ಕುಮಾರನನ್ನಾಗಿ ಕರೆದುಕೊಂಡಾಗ ಆತನು ತನ್ನನ್ನು ದೇವರೊಂದಿಗೆ ಸಮಾನನನ್ನಾಗಿ ಮಾಡಿಕೊಳ್ಳುತ್ತಿದ್ದಾನೆ ಎಂಬುದನ್ನು ಯೆಹೂದ್ಯರು ಅರ್ಥಮಾಡಿಕೊಂಡರು. ಇದು ಯೋಹಾನ 10:30-36ರಲ್ಲಿ ಸ್ಪಷ್ಟಪಡಿಸಲ್ಪಟ್ಟಿದೆ. "ನಾನೂ ತಂದೆಯೂ ಒಂದಾಗಿದ್ದೇವೆ" ಎಂಬ ಯೇಸುವಿನ ಹೇಳಿಕೆಯು ಬಲವಾದ, ಪ್ರತಿಕ್ರಿಯೆಯನ್ನು ತಂದಿತ್ತು:

> ... ಯೆಹೂದ್ಯರು ಆತನನ್ನು ಹೊಡೆದು ಕೊಲ್ಲಬೇಕೆಂದು ತಿರಿಗಿ ಕಲ್ಲುಗಳನ್ನು ತೆಗೆದು ಕೊಂಡು ಬರಲು ಯೇಸು ಅವರನ್ನು, "ತಂದೆಯ ಕಡೆಯಿಂದ ಅನೇಕ ಒಳ್ಳೇ ಕ್ರಿಯೆಗಳನ್ನು ನಿಮಗೆ ತೋರಿಸಿದೆನು; ಅವುಗಳಲ್ಲಿ ಯಾವ ಕ್ರಿಯೆಯಿಂದ ನನ್ನ ಮೇಲೆ ಕಲ್ಲೆಸೆಯುತ್ತೀರಿ" ಎಂದು ಕೇಳಿದ್ದಕ್ಕೆ ಯೆಹೂದ್ಯರು, "ನಾವು ನಿನ್ನ ಮೇಲೆ ಕಲ್ಲೆಸೆಯುವದು ಒಳ್ಳೇ ಕಾರ್ಯದ ದೆಸೆಯಿಂದಲ್ಲ, ದೇವದೂಷಣೆಯ ದೆಸೆಯಿಂದಲೂ ನೀನು ಮನುಷ್ಯನಾಗಿದ್ದು ನಿನ್ನನ್ನು ನೀನೇ ದೇವರನ್ನು ಮಾಡಿಕೊಳ್ಳುವದರ ದೆಸೆಯಿಂದಲೂ ನಿನ್ನ ಮೇಲೆ ಕಲ್ಲೆಸೆಯುತ್ತೇವೆ" ಅಂದರು. ಅದಕ್ಕೆ ಯೇಸು, 'ನೀವು ದೇವರುಗಳೇ' ಎಂದು ನಾನು ಹೇಳಿದೆನು ಎಂಬುದಾಗಿ "ನಿಮ್ಮ ಧರ್ಮ ಶಾಸ್ತ್ರದಲ್ಲಿ ಬರೆದದೆಯಲ್ಲಾ, ಶಾಸ್ತ್ರವು ಸುಳ್ಳಾಗಲಾರದಷ್ಟೆ; ಹಾಗಾದರೆ ದೇವರ ವಾಕ್ಯವನ್ನು ಹೊಂದಿದವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ ತಂದೆಯು ಪ್ರತಿಷ್ಠೆ ಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನುತ್ತೀರೋ?"

ಯೇಸುವು ತನ್ನನ್ನು "ದೇವರ ಕುಮಾರನು" ಎಂದು ಕರೆದುಕೊಂಡಾಗ, ಆತನು ತನ್ನನ್ನು ದೇವರನ್ನಾಗಿ ಮಾಡಿಕೊಂಡನೆಂದು ಯೆಹೂದ್ಯರು ಅರ್ಥಮಾಡಿಕೊಂಡದ್ದು ಇಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಹೀಗೆ ಹೇಳಿಕೊಂಡದ್ದು ಅಂತಿಮವಾಗಿ ಆತನನ್ನು ಮರಣಕ್ಕೆ ನಡಿಸಿತು. ಯೆಹೂದಿ ಕೂಟದ ಮುಂದೆ ಆತನಿಗೆ "ನೀನು ಕ್ರಿಸ್ತನಾಗಿದ್ದರೆ, ನಮಗೆ ಹೇಳು" ಎಂದು ಆಜ್ಞಾಪಿಸಲ್ಪಟ್ಟಿತು. ಇದಕ್ಕೆ ಆತನ ಉತ್ತರವು ಹಕ್ಕು ಸಾಧನೆಯ ಬಗ್ಗೆ ಸಂಶಯಕ್ಕೆ ಎಡೆಬಿಡಲಿಲ್ಲ. ಕ್ರಿಸ್ತನಾಗಿದ್ದೇನೆಂದು ಹಕ್ಕು ಸಾಧಿಸುವ ಮನುಷ್ಯನಿಗೆ ವಿರುದ್ಧವಾಗಿ ಕಾನೂನು ಇಲ್ಲದ್ದರಿಂದ ಅವರು ಏನನ್ನೂ ಮಾಡಲಾರದವರಾಗಿದ್ದರು. "ಹಾಗಾದರೆ, ನೀನು ದೇವರ ಕುಮಾರನೋ?" ಎಂದು ಮುಂದೆ ಆತನು ಕೇಳಲ್ಪಟ್ಟನು. "ಹೌದು, ಆಗಿದ್ದೇನೆ" ಎಂದು ಆತನು ಉತ್ತರಕೊಟ್ಟನು. ಈ ಒಪ್ಪಿಗೆಯನ್ನು ಅನುಸರಿಸಿ ಯೆಹೂದ್ಯರು, "ನಮಗೆ ಸಾಕ್ಷಿ ಇನ್ನು ಯಾತಕ್ಕೆ ಬೇಕು? ನಾವೇ ಇವನ ಬಾಯಿಂದ ಕೇಳಿದೇವಲ್ಲಾ" ಅಂದರು (ಓದಿರಿ ಲೂಕ 22:66-71).

ಆಗ ಅವರು ಆತನನ್ನು ಪಿಲಾತನು ಬಳಿಗೆ ತೆಗೆದು ಕೊಂಡು ಹೋದರು. ಆತನು ತನ್ನನ್ನು "ಕ್ರಿಸ್ತ"ನೆಂಬ ಅರಸನನ್ನಾಗಿ ಮಾಡಿಕೊಂಡಿದ್ದಾನೆಂದು ಮೊದಲ ದೂರನ್ನು ಆತನ ಮೇಲೆ ತಂದರು. ಈ ದೂರಿಗೆ ಶಿಕ್ಷೆಯು ವಿಧಿಸಲ್ಪಡಲಾರದು ಎಂದು ಅವರು ನೋಡಿದಾಗ, "ನಮಗೆ ಒಂದು ನೇಮ ಉಂಟು; ಆ ನೇಮದ ಪ್ರಕಾರ ಇವನು ಸಾಯತಕ್ಕವನು; ಯಾಕಂದರೆ ಅವನು ತನ್ನನ್ನು ದೇವರ ಕುಮಾರನಾಗಿ ಮಾಡಿಕೊಂಡಿದ್ದಾನೆ" (ಯೋಹಾನ 19:7) ಎಂದು ಅವರು ಹೇಳಿದರು. ಅವರ ನೇಮದ ಪ್ರಕಾರ ದೇವ ದೂಷಣೆಯ ಅಪರಾಧಿಯು ಕೊಲ್ಲಲ್ಪಡಬೇಕಾಗಿತ್ತು (ಯಾಜಕಕಾಂಡ

24:16). ದೇವರ ಕುಮಾರನಾಗಿದ್ದೇನೆಂದು ಆತನು ಅರಿಕೆಮಾಡಿದ್ದರಿಂದ ಆತನ ಮೇಲೆ ದೇವ ದೂಷಣೆ ಅಪರಾಧ ಹೊರಿಸಿದರು (ಮತ್ತಾಯ 26:63-66). ಹಾಗಾದರೆ ಯೇಸುವು ದೇವರೊಂದಿಗೆ ಸಮಾನನಾಗಿದ್ದೇನೆ ಎಂದು ಹೇಳಿದನೆಂದು ನೋಡುತ್ತೇವೆ; ತಾನು ದೇಹದಲ್ಲಿಯ ದೇವರು ಆಗಿದ್ದೇನೆಂದು ಹಕ್ಕು ಸಾಧಿಸಿದನು.

## ಆತನು ದೇವರಾಗಿದ್ದನೆಂದು ಅಪೊಸ್ತಲರು ಘೋಷಿಸಿದರು

ಯೇಸುವು ಭೂಲೋಕದಲ್ಲಿದ್ದಾಗ ಆತನಿಗೆ ಅತೀ ಸಮೀಪದಲ್ಲಿದ್ದ ಜನರು - ಆತನ ಅದ್ಭುತಗಳನ್ನು ನೋಡಿದವರು ಹಾಗೂ ಮೂರಕ್ಕಿಂತ ಹೆಚ್ಚು ವರ್ಷಗಳವರಗೆ ಆತನ ಬೋಧನೆಯನ್ನು ಕೇಳಿದವರು - ಅಪೊಸ್ತಲರಾಗಿದ್ದರು. ಆತನು ಸಮಾಧಿಯಿಂದ ಎದ್ದನಂತರ ಆ ಜನರು ಆತನನ್ನು ನೋಡಿದರು ಮತ್ತು ಆತನೊಂದಿಗೆ ಊಟ ಮಾಡಿದರು. ಅನಂತರದಲ್ಲಿ ಅವರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿದರು, ಆತನು ಅವರನ್ನು ತಪ್ಪಿನಿಂದ ಕಾಪಾಡಿದವನು ಅಲ್ಲದೇ ನಮಗೆ ಸಂದೇಶವನ್ನು ಕೊಡುವಲ್ಲಿ ಉಪಯೋಗಿಸಲು ಅವರಿಗೆ ವಾಕ್ಯಗಳನ್ನು ಕೊಟ್ಟನು. ಅವರು ಯೇಸುವು ದೇವರ ಕುಮಾರನು, ಶರೀರಧಾರಿಯಾದ ದೇವರು, ಶರೀರದಲ್ಲಿ ಪ್ರತ್ಯಕ್ಷನಾದ ದೇವರು ಎಂದು ಜನರು ಹೇಳಿದರು.

### ಯೋಹಾನ

ಯೇಸುವಿನ ಪ್ರೀತಿಯ ಶಿಷ್ಯನಾಗಿದ್ದ ಯೋಹಾನನು ಬಹುಶಃ ತಂದೆಯೊಂದಿಗೆ ನಮ್ಮ ಕರ್ತನ ಸಂಬಂಧವನ್ನು ಬಹಳ ಸಂಪೂರ್ಣವಾಗಿ ಅರ್ಥಮಾಡಿಕೊಂಡವನೂ ಮೆಚ್ಚಿಕೊಂಡವನೂ ಆಗಿದ್ದನು. ತಪ್ಪಿಲ್ಲದೇ ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟ ಅವನು ಹೀಗೆ ಬರೆದನು,

> ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾದದ್ದರಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ. ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು. ...
>
> ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಕುಮಾರನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು (ಯೋಹಾನ 1:1-4, 14).

ಇಲ್ಲಿ ನಮೂದಿಸಿದ "ವಾಕ್ಯ" ಎಂಬಾತನು ದೇವತ್ವದಲ್ಲಿ ಎರಡನೆಯ ವ್ಯಕ್ತಿಯಾಗಿದ್ದನು. ವಾಕ್ಯವು ಯೇಸುವಾದನು. ಇದೆಲ್ಲವೂ ವಚನ 14ರಲ್ಲಿ ಹೇಳಲ್ಪಟ್ಟದ್ದರಿಂದ ಈ ಸಂಗತಿಯು ಚರ್ಚಿಸಲ್ಪಡಬೇಕಾಗಿಲ್ಲ. ಆದುದರಿಂದ, ಆತನು ದೇವರೆಂದು ಸಿದ್ಧ ಪಡಿಸಿ ತೋರಿಸುವ ಈ ವಾಕ್ಯವೆಂಬಾತನ ಬಗ್ಗೆ ಹೇಳಿದ ಹೇಳಿಕೆಗಳನ್ನು ಮೊದಲು ಗಮನಿಸೋಣ. ಎರಡನೆಯದಾಗಿ, ಈ ವಾಕ್ಯವು ದೇವರಾಗಿದ್ದಾನೆಂದು ಸಿದ್ಧಪಡಿಸಿ

ತೋರಿಸಲ್ಪಟ್ಟಾತನು ನರಾವತಾರವೆತ್ತಿದನು ಹಾಗೂ ನಜರೇತಿನ ಯೇಸು ಎಂದು ತಿಳಿಯಲ್ಪಟ್ಟನು ಎಂಬುದನ್ನು ಗಮನಿಸೋಣ.

ವಾಕ್ಯವೆಂಬಾತನ ನಿತ್ಯತ್ವವು "ಆದಿಯಲ್ಲಿ ಇದ್ದನು" ಎಂಬ ಮಾತಿನಿಂದ ಮೊದಲು ಹೇಳಲ್ಪಟ್ಟಿದ್ದಾನೆ. ಇರುವದಕ್ಕೆ ಪ್ರತಿಯೊಂದೂ ಪ್ರಾರಂಭಿಸಿದಾಗ ವಾಕ್ಯವೆಂಬಾತನು ಆಗಲೇ "ಇದ್ದನು." ಸೃಷ್ಟಿಸಲ್ಪಟ್ಟ ಯಾವುದೇ ಸಂಗತಿಗಿಂದ ಮೊದಲು ಆತನು ಅಸ್ತಿತ್ವದಲ್ಲಿದ್ದನು. ಆದುದರಿಂದ ಆತನು ಸೃಷ್ಟಿಯ ಯಾವುದೇ ಭಾಗವಾಗಿರುವದಿಲ್ಲ; ಆತನು ನಿತ್ಯನಾದಾತನು. ದೇವರಲ್ಲದೇ ಬೇರೆ ಯಾರೂ ನಿತ್ಯನಾಗಿರುವದಿಲ್ಲ, ಆದುದರಿಂದ ಆತನು ದೇವರಾಗಿದ್ದಾನೆ.

ಅನಂತರ, ತಂದೆಯೊಂದಿಗೆ ಆತನ ಅಸ್ತಿತ್ವವು ಪದ್ಯದಲ್ಲಿ ಎರಡು ಸಲ ಹೇಳಲ್ಪಟ್ಟಿದೆ: "ಮತ್ತು ವಾಕ್ಯವು ದೇವರ ಬಳಿಯಲ್ಲಿ ಇತ್ತು"; "ಆದಿಯಲ್ಲಿ ವಾಕ್ಯವು ದೇವರೊಂದಿಗೆ ಇತ್ತು." ಆಗ, ಆತನ ಅಗತ್ಯವಾದ ಮತ್ತು ವೈಯಕ್ತಿಕ ದೇವತ್ವವು ಒಪ್ಪಿಕೊಳ್ಳಲ್ಪಟ್ಟಿದೆ: "ಮತ್ತು ವಾಕ್ಯವು ದೇವರಾಗಿತ್ತು." ಅಂತಿಮವಾಗಿ, ತಂದೆಯಿಂದ ಆತನ ಭಿನ್ನತೆಯು ಹೇಳಲ್ಪಟ್ಟಿದೆ: "ಆತನು ಆದಿಯಲ್ಲಿ ದೇವರೊಂದಿಗೆ ಇದ್ದನು." ಈ ಪದಗಳು ಎರಡು ಜೀವಿಗಳು, ಅವುಗಳು ಪ್ರತಿಯೊಂದು "ದೇವರು" ಎಂದು ಸ್ಪಷ್ಟವಾಗಿ ಕರೆಯಲ್ಪಡುವ ವಿಚಾರವನ್ನು ಹೇಳದಿದ್ದರೆ ಅವು ಅರ್ಥವಾಗದ ಮಿಶ್ರಣವಾಗುತ್ತವೆ, "ಆ ವಾಕ್ಯವು ದೇವರಾಗಿತ್ತು," ಆದಾಗ್ಯೂ ಆತನು "ದೇವರು" ಎಂದು ಕರೆಯಲ್ಪಡುವ ಇನ್ನೊಬ್ಬ ಜೀವಿಯಾಗಿದ್ದನು; ಅದರ ಪರಿಣಾಮವಾಗಿ "ದೇವರು" ಎಂದು ಕರೆಯಲ್ಪಡುವ ಇಬ್ಬರಿದ್ದರು. ಇನ್ನೊಂದು ಕಡೆಯಲ್ಲಿ ಅವರ ಐಕ್ಯತೆಯ ನಿಮಿತ್ತ, "ಒಬ್ಬನೇ ದೇವರು ಇದ್ದಾನೆ" ಎಂದು ನಾವು ನಿಜವಾಗಿ ಹೇಳಬಹುದು.

ಇದಲ್ಲದೇ, ಈ ವಾಕ್ಯವು ಸೃಷ್ಟಿಕರ್ತನಾಗಿದ್ದನೆಂದು ಹೇಳಲ್ಪಟ್ಟಿದೆ: "ಆತನ ಮೂಲಕವಾಗಿ ಸಮಸ್ತವು ಉಂಟಾಯಿತು. ಉಂಟಾದದ್ದರಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ." ಆತನು ಎಲ್ಲಾ ಸೃಷ್ಟಿಗಿಂತ ಮೊದಲು ಅಸ್ತಿತ್ವದಲ್ಲಿದ್ದನು ಹಾಗೂ ಅದರ ಕಾರಣದಿಂದ ಸೃಷ್ಟಿಸಲ್ಪಡಲಿಲ್ಲ ಎಂಬುದನ್ನು ಪುನಃ ಸಿದ್ಧಾಂತ ಮಾಡಿ ತೋರಿಸುತ್ತದೆ. ಆತನ ಸ್ವಯಂ - ಅಸ್ತಿತ್ವವು ಹಾಗೂ ಆತನ ಬಲಪಡಿಸುವ ಮತ್ತು ಪ್ರಕಟಪಡಿಸುವ ಶಕ್ತಿಯು ಮುಂದಿನ ಹೇಳಿಕೆಯಲ್ಲಿ ಪ್ರತಿಬಿಂಬಿಸಲ್ಪಟ್ಟಿವೆ: "ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು." ಇದರ ಪ್ರಕಾರವಾಗಿ, ಆತನು ಎಲ್ಲಾ ಜೀವದ ಮತ್ತು ಬೆಳಕಿನ ಮೂಲವಾಗಿದ್ದನು. ನಿಜವಾಗಿಯೂ, ಆತನು ದೇವರಾಗಿದ್ದನು.

ಈ ಜೀವಿಯು, ಈ ವಾಕ್ಯವು, "ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು ... ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು." ದೇಹ ವಾಗುವದರಲ್ಲಿ ಆತನು ವಾಕ್ಯದಂತೆ, ದೇವರಂತೆ ಆತನಿಗೆ ಗುಣಲಕ್ಷಣಗಳನ್ನು ಕೊಟ್ಟ ವಿವರಗಳಲ್ಲಿ ಯಾವವನ್ನೂ ಆತನು ಕಳೆದು ಕೊಳ್ಳಲಿಲ್ಲ. ದೇಹದಲ್ಲಿ ಆತನು, "ಅಬ್ರಹಾಮನು ಹುಟ್ಟಿದಕ್ಕಿಂದಲೂ ನಾನು ಮುಂಚಿನಿಂದ ಇದ್ದೇನೆ" (ಯೋಹಾನ 8:58) ಎಂದು ಹೇಳಿದಾಗ ತನ್ನ ನಿತ್ಯವಾದ ಅಸ್ತಿತ್ವವನ್ನು ಆತನು ಒಪ್ಪಿಕೊಂಡನು. ನಜರೇತಿನ ಯೇಸುವಿನಂತೆ, ಆತನು ತಂದೆಯೊಂದಿಗೆ ತನ್ನ ಸಹ - ಅಸ್ತಿತ್ವವನ್ನು, "ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು" (ಯೋಹಾನ 17:5) ಎಂದು ಹೇಳುವದರಿಂದ ಘೋಷಿಸಿದನು.

ಯೋಹಾನನು ಬರೆದ ಮೊದಲನೆಯ ಪತ್ರಿಕೆಯಲ್ಲಿ ಕರ್ತನಾದ ಯೇಸುವಿನ ದೈವತ್ವದ ಮುಂದಿನ ಪುರಾವೆಯನ್ನು ನಾವು ಕಂಡು ಕೊಳ್ಳುತ್ತೇವೆ. ಪ್ರೀತಿಯುಳ್ಳ

ಅಪೊಸ್ತಲನು 1:2ರಲ್ಲಿ ಹೀಗೆ ಬರೆದನು, "ಆ ಜೀವವು ಪ್ರತ್ಯಕ್ಷವಾಯಿತು, ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂಥ ಆ ನಿತ್ಯ ಜೀವವನ್ನು ನಾವು ಕಂಡು ಅದನ್ನು ಕುರಿತು ಸಾಕ್ಷಿ ಹೇಳಿ ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ." ಯೋಹಾನನ ಸುವಾರ್ತೆಯ ದಾಖಲೆಯಲ್ಲಿ ಅವನ ಹೇಳಿಕೆಗೆ ಇದು ಸರಿಯಾದದ್ದಾಗಿದೆ. ಪ್ರತ್ಯಕ್ಷವಾದ ಜೀವವು ನಿತ್ಯ ಜೀವವಾಗಿದೆ. ಅದು ಮೊದಲು ತಂದೆಯೊಂದಿಗೆ ಇತ್ತು ಹಾಗೂ ಆಮೇಲೆ ನಮಗೆ ಪ್ರತ್ಯಕ್ಷವಾಯಿತು. ದೇವರ ಕುಮಾರನು ತಂದೆಯೊಂದಿಗಿದ್ದರೆ ಮತ್ತು ಆಗ ನಮಗೆ ಪ್ರತ್ಯಕ್ಷನಾದರೆ, ಹಾಗೂ ನಿತ್ಯಜೀವವು ತಂದೆಯೊಂದಿಗಿದ್ದರೆ ಮತ್ತು ಆಗ ನಮಗೆ ಪ್ರತ್ಯಕ್ಷ ವಾದರೆ, ನಿತ್ಯಜೀವವು ದೇವರ ಕುಮಾರನಾಗಿತ್ತು ಎಂದು ತೀರ್ಮಾನಿಸುವದರಲ್ಲಿ ನಾವು ಸರಿಯಾಗಿರತಕ್ಕದ್ದು; ಆದರೆ ತೀರ್ಮಾನಗಳನ್ನು ಮಾಡಲಿಕ್ಕೆ ನಾವು ಬಿಡಲ್ಪಟ್ಟಿರುವದಿಲ್ಲ. "ದೇವರ ಕುಮಾರನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತಿದೆ. ಮತ್ತು ನಾವು ದೇವರ ಕುಮಾರನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಆತನು ಸತ್ಯ ದೇವರೂ ನಿತ್ಯ ಜೀವವೂ ಆಗಿದ್ದಾನೆ" (1 ಯೋಹಾನ 5:20, 21) ಎಂದು ಯೋಹಾನನು ಹೇಳಿದ್ದಾನೆ. ಇದರಿಂದ, ದೇವರ ಕುಮಾರನು ತಂದೆಯೊಂದಿಗಿದ್ದ ಆ ನಿತ್ಯಜೀವವೂ, ದೇಹದಲ್ಲಿ ನಮಗೆ ಪ್ರತ್ಯಕ್ಷವಾಯಿತು ಹಾಗೂ ಯೇಸು ಕ್ರಿಸ್ತನೆಂತೆ ತಿಳಿಯಲ್ಪಟ್ಟಿತು ಎಂಬುದನ್ನು ನಾವು ಕಲಿತು ಕೊಳ್ಳುತ್ತೇವೆ.

ಇದನ್ನು ನಾವು ನಮ್ಮ ಹುಡುಕುವಿಕೆಯ ಅಂತ್ಯವನ್ನಾಗಿ ಮಾಡಬಹುದು, ಯಾಕಂದರೆ ಈ ದೇವರ ಕುಮಾರನು, ಯೇಸು ಕ್ರಿಸ್ತನು, ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಿಸಿದಾತನು "ನಿಜವಾದ ದೇವರಾಗಿದ್ದಾನೆ" ಎಂಬ ಸಾಕರಾತ್ಮಕ ಪ್ರೇರೇಪಿತ ಹೇಳಿಕೆಯನ್ನು ಕಂಡುಕೊಂಡಿದ್ದೇವೆ.

**ಪೌಲ**

ಯೇಸುವಿನ ದೈವತ್ವದ ಬಗ್ಗೆ ಬರೆದ ಇನ್ನೊಬ್ಬ ಅಪೊಸ್ತಲನು ಪೌಲನು. ಕರ್ತನು ಪರಲೋಕಕ್ಕೆ ಏರಿಹೋದನಂತರ ಈ ಅಪೊಸ್ತಲನಿಗೆ ಆತನು ಕಾಣಿಸಿಕೊಂಡನು ಹಾಗೂ ಅವನು ಹಿಡಿಯಲ್ಪಟ್ಟು ಅವನು ಹೇಳಲಿಕ್ಕೆ ನ್ಯಾಯವಲ್ಲದ ಸಂಗತಿಗಳನ್ನು ನೋಡಲು ಮತ್ತು ಕೇಳಲು ಬಿಡಲ್ಪಟ್ಟನು (2 ಕೊರಿಂಥ 12:2-4). ಈ ಮಾತುಗಳಲ್ಲಿ ಅವನು ಯೇಸುವನ್ನು ವಿವರಿಸಿದನು:

> [ಯೇಸುವು] ದೇವಸ್ವರೂಪನಾಗಿದ್ದರೂ ದೇವರಿಗೆ ಸಮಾನನಾಗಿರುವುದನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು, ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯ ನಾದನು (ಫಿಲಿಪ್ಪಿ 2:6-8).

ಈ ಯೇಸುವು ಒಮ್ಮೆ ದೇವರೊಂದಿಗೆ ಸರಿಸಮಾನನಾಗಿದ್ದನು, ಆದರೆ ಆತನು ತನ್ನನ್ನು ಬರಿದು ಮಾಡಿಕೊಂಡನು, ಇಲ್ಲವೇ ಆ ಸರಿಸಮಾನತೆಯನ್ನು ಬಿಟ್ಟುಕೊಟ್ಟನು ಎಂದು ಇಲ್ಲಿ ಪೌಲನು ಹೇಳಿದ್ದಾನೆ. ಭೂಲೋಕದಲ್ಲಿದ್ದಾಗ, ಯೇಸುವು ದೇವರ ಸರಿಸಮಾನನು ಅಂದರೆ ದೈವತ್ವದಲ್ಲಿ ಪರಿಪೂರ್ಣನು ಆಗಿದ್ದನು, ದೇವರ ಎಲ್ಲಾ ಬಲಗಳು ಆತನಲ್ಲಿ ವಾಸ

ವಾಗಿದ್ದವು. ಯಾವ ವಿಧದಲ್ಲಿ ಆತನು ದೇವರ ಸಮಾನನು ಆಗಿರಲಿಲ್ಲ? ಮಾನವರ ಸ್ವರೂಪದಲ್ಲಿ ಆತನು ಮಾಡಲ್ಪಟ್ಟನು ಹಾಗೂ ದೇವರ ಸ್ವರೂಪವಾದ ಆತ್ಮನಾಗಿಲ್ಲ. ಮಾನವತೆಯೊಂದಿಗೆ ಆತನು ತನ್ನನ್ನು ಗುರುತಿಸಿಕೊಂಡಾಗ ಆತನು ಅದನ್ನು ಬಿಟ್ಟುಕೊಟ್ಟನು. ನಾವು ಹುಡುಕುತ್ತಿರುವದಕ್ಕಾಗಿ - ಯೇಸುಕ್ರಿಸ್ತನು ಮಾನವರ ಹೋಲಿಕೆಯಲ್ಲಿ ಮಾಡಲ್ಪಟ್ಟ ದೇವರಾಗಿದ್ದನು ಹಾಗೂ ಶರೀರಧಾರಿಯಾದ ದೇವರಂತೆ ನಮ್ಮ ಮಧ್ಯದಲ್ಲಿ ವಾಸ ಮಾಡಿದನು ಎಂಬುದರ ವಿವರಣೆ ಇದಾಗಿದೆ (ನೋಡಿರಿ ಇಬ್ರಿಯ 2:14-17).

ದೇವರ ಕುಮಾರನ ಬಗ್ಗೆ ಪೌಲನು ಇನ್ನೂ ಮುಂದೆ ಹೇಳಿದ್ದಾನೆ,

> ಆತನು ಅದೃಶ್ಯನಾದ ದೇವರ ಪ್ರತಿರೂಪನೂ, ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ಧೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರಭೂತನು (ಕೊಲೊಸ್ಸೆ 1:15-17).

ಯೇಸುವಿನ ದೈವತ್ವದಲ್ಲಿ ನಂಬಿಕೆಯಿಡದವರು "ಸೃಷ್ಟಿಗೆಲ್ಲಾ ಜ್ಯೇಷ್ಠ ಪುತ್ರನು" ಎಂಬ ಮಾತನ್ನು "ಮೊದಲು ಮಾಡಲ್ಪಟ್ಟ ಜೀವಿ" ಎಂದರ್ಥ ಕೊಡಲು ಉಪಯೋಗಿಸುತ್ತಾರೆ. ಆತನು "ಸೃಷ್ಟಿಗೆಲ್ಲಾ ಜ್ಯೇಷ್ಠ ಪುತ್ರನು" ಯಾಕೆ ಎಂಬ ಕಾರಣವು ಮುಂದಿನ ಹೇಳಿಕೆಯಲ್ಲಿ ಕೊಡಲ್ಪಟ್ಟಿದೆ - ಯಾಕಂದರೆ ಆತನಿಂದ ಸರ್ವವೂ ಸೃಷ್ಟಿಸಲ್ಪಟ್ಟಿವೆ. "ಜ್ಯೇಷ್ಠ ಪುತ್ರ" ಪದದ ಅರ್ಥ ಬಾಧ್ಯಸ್ಥ ಮತ್ತು ಒಡೆಯ ಹಾಗೆಯೇ ಮೊದಲಾಗಿ ಹುಟ್ಟಿದವನು ಎಂದಾಗುತ್ತದೆ. ಯೇಸುವು ಎಲ್ಲಾ ಸೃಷ್ಟಿಯ ಕರ್ತನಾಗಿದ್ದಾನೆ, ಯಾಕಂದರೆ ಸರ್ವವೂ ಆತನಿಂದ ಮಾಡಲ್ಪಟ್ಟವು. ಇದು ಒಳ್ಳೆ ಅರ್ಥ ಕೊಡುತ್ತದೆ; ಇತರ ವ್ಯಾಖ್ಯಾನ ಕೊಡುವದಿಲ್ಲ. "ಆತನು ಎಲ್ಲಕ್ಕೂ ಮೊದಲು ಇದ್ದವನು" ಅಂದರೆ ಸೃಷ್ಟಿಸಲ್ಪಟ್ಟ ಎಲ್ಲವುಗಳಿಗಿಂತ ಮೊದಲು ಇದ್ದವನು ಎಂಥರ್ಥ. ಸೃಷ್ಟಿಸಲ್ಪಟ್ಟ ಎಲ್ಲವುಗಳಿಗಿಂತ ಮೊದಲು ಆತನು ಅಸ್ತಿತ್ವದಲ್ಲಿ ಇದ್ದುದರಲ್ಲಿ ಆತನ ದೈವತ್ವವನ್ನು ಇದು ವಾದಿಸುತ್ತದೆ. "ಆತನು ಸಮಸ್ತಕ್ಕೂ ಆಧಾರಭೂತನು." ಸೃಷ್ಟಿಸಲ್ಪಟ್ಟ ಜೀವಿಯ ಬಗ್ಗೆ ಇದು ಹೇಳಲ್ಪಡಲಾರದು, ಆದರೆ ಸಮಸ್ತವನ್ನು ಸೃಷ್ಟಿಸಿದಾತನ ಬಗ್ಗೆ ಇದು ಹೇಳಲ್ಪಡಬಹುದು.

ಸಂಶಯ ಅಥವಾ ಅಪಾರ್ಥಕ್ಕೆ ಎಡೆಕೊಡದಂಥ ಪೌಲನ ಹೇಳಿಕೆಯನ್ನು ಮುಂದೆ ಯೋಚಿಸೋಣ. ಯೆಹೂದ್ಯರ ಬಗ್ಗೆ ಮಾತಾಡುವಾಗ ಅವನು ಹೀಗೆ ಹೇಳಿದನು, "... ಕ್ರಿಸ್ತನು ಶರೀರಸಂಬಂಧವಾಗಿ ಅವರ ವಂಶದಲ್ಲಿಯೇ ಹುಟ್ಟಿದವನು, ಆತನು ಎಲ್ಲಾದರ ಮೇಲೆ ಒಡೆಯನೂ ನಿರಂತರ ಸ್ತುತಿ ಹೊಂದತಕ್ಕ ದೇವರೂ ಆಗಿದ್ದಾನೆ" (ರೋಮಾಪುರ 9:5). ಈ ವಾಕ್ಯಭಾಗದ ಇಂದಿನ ಭಾಷಾಂತರದಲ್ಲಿ ಸರಳವಾದ ಮಹತ್ವವು ಕ್ರಿಸ್ತನು, ಆತನ ಯೆಹೂದಿ ವಂಶಾವಳಿಯ ಮುಖಾಂತರ ಆತನಿಗೆ ಕೊಡಲ್ಪಟ್ಟ ಶರೀರಧಾರಿಯಾದ ದೇವರಾಗಿದ್ದಾನೆ ಎಂಬುದು. ಆತನು ದೇವರಾಗಿದ್ದುದರಿಂದ, ಯೆಹೂದ್ಯರಿಂದ ಸ್ವೀಕರಿಸುತ್ತಿರುವ ಆತನಿಗಿದ್ದುದರ ಮತ್ತು ಇರುವ ದೂಷಣೆಗಳಿಗಿಂತ ಹೆಚ್ಚಾಗಿ ಆಶೀರ್ವಾದಗಳಿಗೆ ಅರ್ಹನಾಗಿದ್ದಾನೆ.

ಯೇಸುವಿನ ಪುನರುತ್ಥಾನವು ಆತನು ದೇವರ ಕುಮಾರನಾಗಿದ್ದನು ಇಲ್ಲವೇ ಶರೀರಧಾರಿಯಾದ ದೇವರಾಗಿದ್ದನು ಎಂಬುದಕ್ಕೆ ಅತೀ ದೊಡ್ಡ ರುಜುವಾತಾಗಿದೆ ಎಂದು ಅಪೊಸ್ತಲ ಪೌಲನು ಯೋಚಿಸಿದನು. "ಈತನು ನನ್ನ ಪ್ರಿಯ ಕುಮಾರನು"

(ಮತ್ತಾಯ 3:17; 17:5; ಮಾರ್ಕ 9:7; ನೋಡಿರಿ ಲೂಕ 9:35) ಎಂದು ಹೇಳುತ್ತ ದೇವರು ಎರಡು ಸಲ ಪರಲೋಕದಿಂದ ಮಾತಾಡಿದ್ದಾನೆ, ಆದರೆ ಯೆಹೂದ್ಯರು ಆತನನ್ನು ನಂಬುವದನ್ನು ನಿರಾಕರಿಸಿದರು. ಯಾವುದೇ ಮನುಷ್ಯನು ಎಂದೂ ಮಾಡದಂಥ ಅದ್ಭುತ ಕಾರ್ಯಗಳನ್ನು ಯೇಸುವು ಮಾಡಿದನು, ಆದಾಗ್ಯೂ ಅವರು ಆತನನ್ನು ನಂಬಲಿಲ್ಲ. ತಾನು ದೇವರ ಕುಮಾರನಾಗಿದ್ದೇನೆಂದು ಆಣೆಯೊಂದಿಗೆ ಸಾಕ್ಷಿ ಕೊಟ್ಟಿದ್ದನು; ಆದರೆ ಈ ಸಾಕ್ಷಿಯನ್ನು ಸ್ವೀಕರಿಸುವ ಬದಲು, ಅದರ ನಿಮಿತ್ತ ಆತನನ್ನು ದೇವ ದೂಷಣೆ ಮಾಡಿದವನಂತೆ ಶಿಲುಬೆಗೆ ಹಾಕಿದರು. ಪರಲೋಕದ ಮಹಾ ದೇವರು ಭೂಲೋಕದ ಮೇಲೆ ಉನ್ನತ ನ್ಯಾಯಾಲಯಗಳ ತೀರ್ಮಾನವನ್ನು ತಲೆಕೆಳಗಾಗಿ ಮಾಡಿದನು; ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸುವದರಿಂದ ಆತನು ತನ್ನ ಕುಮಾರನಾಗಿರುವನೆಂದು ಘೋಷಿಸಿದನು.

ದೇವರ ಸುವಾರ್ತೆಯ ಬಗ್ಗೆ ಮಾತಾಡುವಲ್ಲಿ, ಪೌಲನು ಹೀಗೆ ಬರೆದನು,

> ... ಆತನ ಕುಮಾರನು ... ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನೂ, ಪರಿಶುದ್ಧವಾದ ಆತ್ಮವುಳ್ಳವನಾಗಿದ್ದು ಸತ್ತಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವ ಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ (ರೋಮಾಪುರ 1:3, 4).

ಇಲ್ಲಿ ಪೌಲನು ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ದೇವರ ಕುಮಾರನಂತೆ ಉಲ್ಲೇಖಿಸಿದ್ದಾನೆ. ಈ ಕುಮಾರನಿಗೆ ದಾವೀದನ ಮುಖಾಂತರ ಆತನ ಮಾನವತೆ ಇತ್ತು, ಆದರೆ ಆತನ ಪುನರುತ್ಥಾನವು ಆತನು ಮಾನವನಿಗಿಂತ ಹೆಚ್ಚಾದವನಾಗಿದ್ದನೆಂದು ಪ್ರಕಟಿಸುತ್ತದೆ. ಆತನು ದೇವರ ಕುಮಾರನು ಎಂದು ಹೇಳಿದ್ದಕ್ಕಾಗಿ ಕ್ರೂಜಿಸಲ್ಪಟ್ಟನು - ಅಂದರೆ ಆತನು ದಾವೀದನ ಮಗನಾಗಿದ್ದರೂ ಆತನಿಗೆ ಅದಕ್ಕಿಂತ ಹೆಚ್ಚು ಉನ್ನತವಾದ ಸಂಬಂಧವಿತ್ತು. ದಾವೀದನೊಂದಿಗೆ ಆತನ ಸಂಬಂಧದ ಮುಖಾಂತರ ಆತನ ದೈವತ್ವ ಬರಲಿಲ್ಲ, ಆದರೆ ದೇವರೊಂದಿಗಿನ ಆತನ ಸಂಬಂಧದ ಮುಖಾಂತರ ಬಂದಿತು. ಯೇಸು ಮಾಡಿದ ಹಕ್ಕು ಸಾಧನೆಯನ್ನು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಿಂದ ಗೌರವಿಸಿದನು. ಯೇಸು ಕ್ರಿಸ್ತನ ಮಾನವತೆ ಹಾಗೂ ದೈವತ್ವಕ್ಕೆ ರುಜುವಾತಿನಲ್ಲಿ ಗಟ್ಟಿಯಾದ ಬಂಡೆಯಾಗಿ ಈ ವಾಕ್ಯಭಾಗ ನಿಲ್ಲುತ್ತದೆ. "ನಮ್ಮ ಕರ್ತನಾದ ಯೇಸುಕ್ರಿಸ್ತನ" ವ್ಯಕ್ತಿಯಲ್ಲಿ, ಆ ವ್ಯಕ್ತಿಯನ್ನು ದೇವರ ಕುಮಾರ ಎಂದು ಕರೆದು ಅದು ಮಾನವತೆಯನ್ನೂ ದೇವತ್ವವನ್ನೂ ಒಂದಾಗಿ ಬಂಧಿಸುತ್ತದೆ.

ದೇಹಕ್ಕೆಸಂಬಂಧಿಸಿ, ಯೇಸುವು ದಾವೀದನ ವಂಶಜನಾಗಿ "ಜನಿಸಿದನು" ಎಂದು ಪೌಲನು ಹೇಳಿದನು. ಜನನವು ಪ್ರಾರಂಭವನ್ನು ಸೂಚಿಸುತ್ತದೆ. ಹಾಗಿದ್ದರೂ, ಕ್ರಿಸ್ತನ ಆತ್ಮದ ಬಗ್ಗೆ, ಆತನು ದೇವರ ಕುಮಾರನು ಆಗಿದ್ದಾನೆಂದು ಘೋಷಿಸಲ್ಪಟ್ಟನು ಎಂದು ಪೌಲನು ಹೇಳಿದನು. ಅದು ಪ್ರಾರಂಭವನ್ನು ಸೂಚಿಸುವದಿಲ್ಲ. ನಜರೇತಿನ ಯೇಸುವಿನಲ್ಲಿ ಜನನದಲ್ಲಿ ಅದರ ಆರಂಭವಿದ್ದ ಮಾನವತೆಯ ಹಾಗೂ ದೇವರೊಂದಗಿದ್ದ ಮತ್ತು ದೇವರಾಗಿದ್ದ ದೈವತ್ವದ ಸಂಯೋಗವನ್ನು ನಾವು ನೋಡುತ್ತೇವೆ. ಆತನಲ್ಲಿ - ಆತನಲ್ಲಿ ಮಾತ್ರವೇ ದೇಹದಲ್ಲಿ ದೇವರು ಪ್ರಕಟಿಸಿಕೊಂಡದ್ದನ್ನು ನೋಡುತ್ತೇವೆ.

## ಆತನು ದೇವರಾಗಿದ್ದಾನೆಂದು ಆತನ ಕಾರ್ಯಗಳು ಪ್ರಕಟಿಸುತ್ತವೆ

ಭೂಲೋಕದಲ್ಲಿದ್ದಾಗ ಯೇಸುವು ಮಾಡಿದ ಕಾರ್ಯಗಳು, ಆತನ ಹೇಳಿಕೆಯ ಪ್ರಕಾರವಾಗಿ, ಬೇರೆ ಯಾರೂ ಎಂದೂ ಮಾಡದಂಥವುಗಳಾಗಿದ್ದವು. "ಮತ್ತಾರೂ ನಡಿಸದ ಕ್ರಿಯೆಗಳನ್ನು ನಾನು ಅವರಲ್ಲಿ ನಡಿಸದೆ ಇದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ" (ಯೋಹಾನ 15:24ಎ) ಎಂದು ಆತನು ಹೇಳಿದನು. ತನ್ನ ಕಾರ್ಯಗಳು ತನ್ನ ದೈವತ್ವದ ಪುರಾವೆಗೆ ಸಾಕಾದಷ್ಟುವುಗಳಾಗಿವೆ ಎಂದು ಆತನು ಯೋಚಿಸಿದನು; "ಹೇಗಂದರೆ ಪೂರೈಸುವದಕ್ಕೆ ತಂದೆ ನನಗೆ ಕೊಟ್ಟಿರುವ ಕೆಲಸಗಳು ಅಂದರೆ ನಾನು ಮಾಡುವ ಕೆಲಸಗಳೇ, ತಂದೆಯು ನನ್ನನ್ನು ಕಳುಹಿಸಿಕೊಟ್ಟನೆಂಬದಾಗಿ ನನ್ನ ವಿಷಯದಲ್ಲಿ ಸಾಕ್ಷಿಕೊಡುತ್ತವೆ" (ಯೋಹಾನ 5:36) ಎಂದು ಹೇಳಿದನು. ಈ ಕಾರ್ಯಗಳು ಕ್ರಿಸ್ತನ ದೈವತ್ವಕ್ಕೆ ಸಾಕಷ್ಟು, ಇನ್ನೂ ವಿಫುಲವಾಗಿ ಪುರಾವೆಯನ್ನು ಒದಗಿಸುತ್ತವೆ. ನಂಬದೇ ಇರುವವರೆಲ್ಲರೂ ಖಂಡಿಸಲ್ಪಡುವರು. "ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" ಎಂದು ಆತನು ಹೇಳಿದನು (ಯೋಹಾನ 8:24).

### ದೆವ್ವಗಳ ಮೇಲೆ ಅಧಿಕಾರ

ದುರಾತ್ಮಗಳ ಮೇಲೆ ಯೇಸುವು ಸಾಧಿಸಿದ ಬಲವು ಮಾನವ ಜೀವಿಯನ್ನು ಬಲವನ್ನು ಮೀರಿದ ಬಲದ ರುಜುವಾತಾಗಿದೆ. ಬೆಲ್ಜೆಬೂಲನಿಂದ ದೆವ್ವಗಳನ್ನು ಓಡಿಸುವನೆಂದು ಆತನು ದೂರಲ್ಪಟ್ಟಾಗ, "ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದಕ್ಕಾಗುವದಿಲ್ಲ; ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು" (ಮಾರ್ಕ 3:27) ಎಂದು ಉತ್ತರ ಕೊಟ್ಟನು. ಇಲ್ಲಿ ಆತನು ಮಾನವತೆಯನ್ನು ದಾಟಿ ಇರುವ ಬಲವನ್ನು ಕುರಿತು ಹೇಳಿದನು.

ಯೇಸುವಿನ ಪ್ರಸನ್ನತೆಯು ದೆವ್ವಗಳಿಗೆ ತೊಂದರೆಯನ್ನು ಉಂಟುಮಾಡು ವಂಥದ್ದಾಗಿತ್ತು. ಕಪೆರ್ನೌಮಿನ ಸಭಾಮಂದಿರದಲ್ಲಿ ಒಂದು ದೆವ್ವವು - "ನಮ್ಮನ್ನು ನಾಶಮಾಡುವದಕ್ಕೆ ಬಂದೆಯಾ? ನಿನ್ನನ್ನು ಬಲ್ಲೆನು; ನೀನು ದೇವರ ಪರಿಶುದ್ಧನು!" ಎಂದು ಕೂಗಿ ಹೇಳಿತು (ಮಾರ್ಕ 1:24ಬಿ). "ನೀನು ದೇವರ ಕುಮಾರುನು" ಎಂದು ಇನ್ನೊಂದು ಹೇಳಿತು (ಮಾರ್ಕ 3:11ಬಿ). ತಮ್ಮನ್ನು ನಾಶಮಾಡುವಾತನೆಂದು ದುರಾತ್ಮಗಳು ಆತನನ್ನು ಗುರುತಿಸಿದವು; "ಕಾಲ ಬರುವದಕ್ಕಿಂತ ಮುಂಚೆ ನಮ್ಮನ್ನು ಕಾಡುವದಕ್ಕೆ ಇಲ್ಲಿಗೆ ಬಂದಿಯಾ?" ಎಂದು ಕೇಳಿದವು (ಮತ್ತಾಯ 8:29). ಆತನ ಬಲವು ದೇವರ ಬಲಕ್ಕಿಂತ ಕಡಿಮೆಯಾದದ್ದಲ್ಲ ಎಂದು ಸಿದ್ಧಪಡಿಸಿ ತೋರು ಸುವದಲ್ಲದೇ, ಈ ವಾಕ್ಯ ಭಾಗಗಳು ಯೇಸು ಕ್ರಿಸ್ತನು ದೇವರ ಕುಮಾರನೆಂದು, ತಮ್ಮ ಶಿಕ್ಷೆಗಾಗಿ ಸಮಯವು ಬರುವಾಗ ಆತನನ್ನು ಎದುರಿಸಬೇಕು ಎಂಬುದನ್ನೂ ದೆವ್ವಗಳು ಗುರುತಿಸಿದವೆಂದು ತೋರಿಸುತ್ತವೆ.

### ಪಾಪಗಳನ್ನು ಕ್ಷಮಿಸಲಿಕ್ಕೆ ಬಲ

ಇಲ್ಲಿ ಭೂಲೋಕದಲ್ಲಿದ್ದಾಗ, ಯೇಸುವು ಪಾಪಗಳನ್ನು ಕ್ಷಮಿಸಿದನು - ಲೂಕ 5:20, 21ರಲ್ಲಿ ಶಾಸ್ತ್ರಿಗಳು ಮತ್ತು ಫರಿಸಾಯರು ಸರಿಯಾಗಿ ಹೇಳಿದಂತೆ, ಬೇರೆ ಯಾರೂ ಅಲ್ಲದೇ ದೇವರು ಮಾತ್ರ ಹಾಗೆ ಮಾಡಬಲ್ಲನು. "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂದು ಆತನು ಒಬ್ಬ ಮನುಷ್ಯನಿಗೆ ಹೇಳಿದಾಗ ದೇವ ದೂಷಣೆ ಎಂದು ಅವರು ಯೇಸುವನ್ನು

ದೂಷಿದರು. ಪಾಪಗಳನ್ನು ಕ್ಷಮಿಸಲು ತನಗೆ ಬಲವಿದೆಯೆಂದು ಸಿದ್ಧಪಡಿಸಿ ತೋಲಿಸಲು ಅವರ ಕಣ್ಣುಗಳ ಮುಂದೆ ಆತನು ಒಬ್ಬ ಮನುಷ್ಯನನ್ನು ಗುಣಪಡಿಸಿದನು (ನೋಡಿಲಿ ಮತ್ತಾಯ 9:2-8 ಮತ್ತು ಮಾರ್ಕ 2:1-12). ಈ ಘಟನೆಯು ಎರಡು ಸತ್ಯಗಳನ್ನು ಸಿದ್ಧಪಡಿಸಿ ತೋಲಿಸಿತು. ಮೊದಲನೆಯದು, ತನ್ನ ಸ್ವಂತ ಬಲದ ಮುಖಾಂತರ ರೋಗಿಯನ್ನು ಗುಣಪಡಿಸ ಬಲ್ಲಾತನು ಪಾಪಗಳನ್ನು ಕ್ಷಮಿಸಲೂ ಸಹ ಬಲ್ಲನು. ಎರಡನೆಯದು, ಯೇಸುವು ಪಾಪಗಳನ್ನು ಕ್ಷಮಿಸ ಬಲ್ಲಾತನಾಗಿದುದ್ದರಿಂದ (ದೇವರನ್ನು ಬಿಟ್ಟು ಬೇರೆಯಾರೂ ಮಾಡಲಾರರು) ಆತನು ದೇವರಾಗಿದ್ದನು.

**ಅಪರಿಮಿತ ಬಲ**

ಆತನು ಬಿರುಗಾಳಿಯನ್ನು ನಿಲ್ಲಿಸಿದ, ರೊಟ್ಟಿ, ಮೀನುಗಳ ತುಂಡುಗಳಿಂದ ಸಾವಿರಾರು ಜನರಿಗೆ ಊಟಮಾಡಿಸಿದ ಹಾಗೂ ಹನ್ನೆರಡು ಬುಟ್ಟಿ ತುಂಡುಗಳನ್ನು ಕೂಡಿಸಿದ, ನೀರಿನ ಮೇಲೆ ನಡೆದ, ಸತ್ತವರನ್ನು ಜೀವಕ್ಕೆ ಎಬ್ಬಿಸಿದ ಸಂಗತಿಗಳ ಪುನರಾವಲೋಕನ ಮಾಡಲು ಸಮಯವಿರುವದಿಲ್ಲ. ಈ ಪ್ರತಿಯೊಂದು ಘಟನೆಗಳ ಮೇಲೆ ಅವಲಂಭಿಸಿದ ತೀರ್ಮಾನವು ಯೇಸುವು ದೇಹದಲ್ಲಿಯ ದೇವರಾಗಿದ್ದನು ಎಂದಾಗುತ್ತದೆ (ಅಪೊಸ್ತಲರ ಕೃತ್ಯ 3:6ರಲ್ಲಿ ಸುಂದರ ದ್ವಾರದ ಬಳಿಯಲ್ಲಿ ಕುಂಟನಾದ ಭಿಕ್ಷಕನನ್ನು ಪೇತ್ರನು ಗುಣ ಪಡಿಸಿದಂತೆ) ನಜರೇತಿನ ಯೇಸು ಕ್ರಿಸ್ತನ ಹೆಸರಿನಲ್ಲಿ ಅದ್ಭುತ ಕಾರ್ಯವನ್ನು ಮಾಡಿದ್ದನ್ನು ಹೊರತು ಪಡಿಸಿ, ಅಂಥ ಯಾವದೇ ಅದ್ಭುತ ಕಾರ್ಯಗಳನ್ನು ಯಾವುದೇ ಮನುಷ್ಯನು ಮಾಡಲು ಶಕ್ತನಾಗಿಲ್ಲದ್ದರಿಂದ, ಯೇಸುವು ದೇಹದಲ್ಲಿ ಪ್ರಕಟಿಸಿಕೊಂಡ ದೇವರಾಗಿದ್ದನು ಎಂದು ಹೇಳುವಲ್ಲಿ ನಾವು ನಿಶ್ಚಯವಾಗಿ ನ್ಯಾಯ ಬದ್ಧರಾಗಿದ್ದೇವೆ. ವ್ಯಕ್ತಿಯಾಗಿ ಬೇರೆ ಯಾರೂ ಅಂಥ ಬಲವನ್ನು ಪ್ರಯೋಗಿಸಿರುವದಿಲ್ಲ.

## ಮುಕ್ತಾಯ

ಯೇಸುವು ದೇವರ ಕುಮಾರನಾಗಿದ್ದಾನೆ, ದೇಹದಲ್ಲಿ ಪ್ರಕಟಿಸಿಕೊಂಡ ದೇವರಾಗಿದ್ದಾನೆ ಎಂಬ ಮುಖ್ಯ ಪ್ರಸ್ತಾಪವು ಸುವಾರ್ತೆಯ ಕೇಂದ್ರದಲ್ಲಿದೆ. ಉಳಿದ ಪ್ರತಿಯೊಂದು ಸಂಗತಿಯು ನೆಲೆಗೊಂಡಿರುವ ಅಸ್ತಿವಾರ ಅದಾಗಿದೆ. ಈ ಸತ್ಯದಿಂದ, ಶೋಧನೆಗಳ ಸಮಯದಲ್ಲಿ ನಮ್ಮನ್ನು ಕಾಪಾಡಲಿಕ್ಕೆ ಪ್ರೋತ್ಸಾಹದ ಅನೇಕ ಪಾಠಗಳನ್ನು ತೆಗೆದು ಕೊಳ್ಳಬಹುದು.

ಮೊದಲನೆಯದು, ಯೆಹೂದಿ ಧರ್ಮದ ಮೇಲೆ ಕ್ರೈಸ್ತತ್ವದ ಶ್ರೇಷ್ಠತೆಯು ಯೇಸುವು ಮೋಶೆಗಿಂಥ ಹೆಚ್ಚು ದೊಡ್ಡವನಾಗಿದ್ದಾನೆ ಎಂಬ ಸಂಗಿತಯ ಮೇಲೆ ಅವಲಂಭಿಸಿದೆ. ಯೇಸುವು ದೇವರ ಕುಮಾರನಾಗಿದ್ದನು; ಮೋಶೆಯು ಆಗಿರಲಿಲ್ಲ. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಇದು ದೀರ್ಘವಾಗಿ ಚರ್ಚಿಸಲ್ಪಟ್ಟಿದೆ.

ಎರಡನೆಯದು, ದೇವದೂತರ ಮೇಲೆ ಉನ್ನತ ಸ್ಥಿತಿಗೇರಿಸಲ್ಪಡುವ ನಮ್ಮ ನಿರೀಕ್ಷೆಯು ಯೇಸುವು ದೇಹದಲ್ಲಿ ದೇವರು ಆಗಿದ್ದನೆಂಬ ಸಂಗತಿಯ ಮೇಲೆ ನೆಲೆಗೊಂಡಿದೆ. ಆತನು ಒಂದು ಉದಾಹರಣೆಯಾಗಿ ಇಡಲ್ಪಟ್ಟಿದ್ದಾನೆ; ನಾವೂ ಸಹ ಉನ್ನತ ಸ್ಥಿತಿಗೇರಿಸಲ್ಪಡುವೆವೆಂಬ ರುಜುವಾತಿನಂತೆ ಆತನು ಪ್ರಥಮ ಫಲವಾಗಿದ್ದಾನೆ (1 ಕೊರಿಂಥ 15:20-22; 1 ಪೇತ್ರ 5:6). ಆತನೊಂದಿಗೆ, ಪರಲೋಕದಲ್ಲಿ ನಮಗಾಗಿ ಕಾದಿಟ್ಟ, ಹೊಲೆಯಾಗದ, ಬಾಡಿಹೋಗದ ಸ್ವಾಸ್ಥ್ಯವು ನಮಗೆ ಕೊಡಲ್ಪಡುತ್ತದೆ

(1 ಪೇತ್ರ 1:4).

ಮೂರನೆಯದು, ದೇವರು ನರಾವತಾರ ಎತ್ತಿ, ಮನುಷ್ಯರ ಮಧ್ಯದಲ್ಲಿ ವಾಸಿಸುವುದು, ತಪ್ಪಿಹೋದವರಿಗಾಗಿ ಆತನ ಪ್ರೀತಿಯನ್ನು ಪ್ರದರ್ಶಿಸುತ್ತದೆ. ಇಲ್ಲಿ ಜನರನ್ನು ಹುಡುಕುವ ದೇವರ ಚಿತ್ರವು ಇರುತ್ತದೆ. ದೇವರನ್ನು ಹುಡುಕುವದಕ್ಕಾಗಿ ಮನುಷ್ಯನ ಕರ್ತವ್ಯದ ಬಗ್ಗೆ ಬಹಳವಾದದ್ದು ಹೇಳಲ್ಪಟ್ಟಿದೆ; ಆದರೆ ತಪ್ಪಿಹೋದವರನ್ನು ಹುಡುಕಿ ರಕ್ಷಿಸುವದಕ್ಕಾಗಿ ದೇವರು ಬಂದದ್ದರಿಂದ ಮಾತ್ರವೇ ದೇವರನ್ನು ಹುಡುಕುವದು ಮನುಷ್ಯನ ಕರ್ತವ್ಯವಾಯಿತು (ಲೂಕ 19:10). ಆತನು "ಅಬ್ರಹಾಮನ ಸಂತತಿಯವರಿಗೆ ಸಹಾಯ" ಕೊಡುವಾಗ, ದೇವರ ಕುಮಾರನು ಬಿದ್ದುಹೋದ ದೇವದೂತರ ಮೇಲೆ ದಾಟಿ ಹೋಗಿ, ಅವರಿಗೆ ಸಹಾಯ ಕೊಡದೇ ಇದ್ದದ್ದು, ಗಮನಿಸಲು ಆಸಕ್ತಿಯುಳ್ಳದ್ದಾಗಿದೆ (ಇಬ್ರಿಯ 2:16). ಆತನು ಪ್ರೀತಿಸಿದ್ದು ಹಾಗೂ ಮೇಲಕ್ಕೆತ್ತಿದ್ದು ಮಾನವತೆಯನ್ನು ಆದರೆ ದೇವದೂತರನ್ನಲ್ಲ.

ನಾಲ್ಕನೆಯದು, ದೇವರು ನರಾವತಾರ ಎತ್ತಿದ್ದು ಮತ್ತು ಜನರ ಮಧ್ಯದಲ್ಲಿ ಜೀವಿಸಿದ್ದು ಹಾಗೂ ಮಾನವನಿಗಾಗಿ ಮರಣಹೊಂದಿದ್ದು ದೇವರ ದೃಷ್ಟಿಯಲ್ಲಿ ಮಾನವ ಜೀವಿಯು ಹೇಗೆ ಮೌಲ್ಯವುಳ್ಳವನಾಗಿದ್ದಾನೆ ಎಂಬುದನ್ನು ತೋರಿಸುತ್ತದೆ. ಮನುಷ್ಯನು ಗುಬ್ಬಿಗಿಂತ ಇಲ್ಲವೇ ಕುರಿಗಿಂತ ಹೆಚ್ಚು ಬೆಲೆಯುಳ್ಳವನಾಗಿದ್ದಾನೆಂದು ಯೇಸು ಯೆಹೂದ್ಯರಿಗೆ ಬೋಧಿಸಿದನು. ಆತನು ಮನುಷ್ಯನಿಗಾಗಿ ಸತ್ತ, ನಮ್ಮ ಸ್ಥಳದಲ್ಲಿ ತನ್ನ ಜೀವವನ್ನು ಕೊಟ್ಟ, ಸಂಗತಿಯು ಆತನು ತನ್ನ ಸ್ವಂತ ಜೀವಕ್ಕೆ ಮಾಡಿದ್ದಕ್ಕಿಂತ ಎಷ್ಟೋ ಹೆಚ್ಚಾಗಿ ಆತನು ನಮ್ಮ ಜೀವಿತಕ್ಕಾಗಿ ಬೆಲೆಕಟ್ಟಿದನೆಂದು ಸೂಚಿಸುತ್ತದೆ. ಭೂಲೋಕದ ಮೇಲೆ ನಮ್ಮ ಜೀವಿತಗಳು ಸಾಧ್ಯವಾದಷ್ಟು ಬೆಲೆಯುಳ್ಳವುಗಳಾಗುವಂತೆ ನರಕದಿಂದ ಮಾತ್ರವಲ್ಲದೇ, ಈ ಜೀವನದಲ್ಲಿಯ ಪಾಪದಿಂದ ನಮ್ಮನ್ನು ರಕ್ಷಿಸಲು ಆತನು ಬಯಸುತ್ತಾನೆ. ನಾವು ಪಾಪದಲ್ಲಿ ಜೀವಿಸಿದರೆ, ನಾವು ಬೆಲೆಯಿಲ್ಲದವರಾಗುತ್ತೇವೆ. ಆತನಿಗಾಗಿ ಜೀವಿಸುವುದು ಮಾತ್ರವೇ ನಮ್ಮ ಜೀವಿತಗಳನ್ನು ಬೆಲೆಯುಳ್ಳವುಗಳನ್ನಾಗಿ ಮಾಡುವ ಮಾರ್ಗವಾಗಿದೆ.

---

ಟಿಪ್ಪಣೆಗಳು

[1]Justin Martyr, *Dialogue of Justin, Philosopher and Martyr, with Trypho, a Jew*, 48. Alexander Roberts and James Donaldson, eds., *The Ante-Nicene Fathers: Translations of the Writings of the Fathers down to A.D. 325*. rev. and arr. A. Cleveland Coxe (Grand Rapids, Mich.: Wm. B. Eerdmans Publishing Co., 1957).
[2]Ibid. 49.

This lesson was adapted from *Abilene Christian College Lectures*, 1938, Used by permission of Abilene Christian University Lectureship Direction.

© 2009 Truth for Today